JETIR.ORG ISSN: 2349-5162 | ESTD Year : 2014 | Monthly Issue
JOURNAL OF EMERGING TECHNOLOGIES AND INNOVATIVE RESEARCH (JETIR)
An International Scholarly Open Access, Peer-reviewed, Refereed Journal

# ANALYSIS OF NOVELS OF K. V. PUTTAPPA

## ಕೆ. ವಿ. ಪುಟ್ಟಪ್ಪ ಅವರ ಕಾದಂಬರಿಗಳ ವಿಶ್ಲೇಷಣಾತ್ಮಕ ಅಧ್ಯಯನ

ಡಾ. ಆರ್. ವಿ.ಪಾಟೀಲ
**ಸಹ ಪ್ರಾಧ್ಯಾಪಕರು & ಮುಖ್ಯಸ್ಥರು, ಕನ್ನಡ ವಿಭಾಗ,**
**ಜೆ. ಎಸ್. ಎಸ್. ಬನಶಂಕರಿ ಕಲಾ, ವಾಣಿಜ್ಯ ಮತ್ತು**
**ಎಸ್. ಕೆ. ಗುಬ್ಬಿ ವಿಜ್ಞಾನ ಮಹಾವಿದ್ಯಾಲಯ, ವಿದ್ಯಾಗಿರಿ–ಧಾರವಾಡ**

**ಆಶಯ (Abstract) :** ವಿಶ್ವಮಾನವ ತತ್ವ ಸಾರಿದ ಪ್ರಕೃತಿ ಜನ್ಯ ಕವಿ, ಬದುಕನ್ನು ಅಪಾರ ಶ್ರದ್ಧೆಯಿಂದ ನೋಡಿದ ಕುವೆಂಪುರವರು. ಐರೀಶ್ ಕವಿಯ ಮೆಚ್ಚುಗೆ ಪಡೆದವರು. ಇವರು ಕನ್ನಡ ಕಾದಂಬರಿ ಸಾಹಿತ್ಯ ಕ್ಷೇತ್ರದಲ್ಲೂ ತಮ್ಮದೆ ಆದ ವಿಶಿಷ್ಟ ಸ್ಥಾನ ಪಡೆದಿರುವರು. ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಇವರು ಕುವೆಂಪು ಎಂದೆ ಜನಾನುರಾಗಿಯಾದವರು. ಇವರು ಎರಡು ಕಾದಂಬರಿಗಳನ್ನು ಬರೆಯುವುದರ ಮೂಲಕ ಕನ್ನಡ ಕಾದಂಬರಿ ಕ್ಷೇತ್ರಕ್ಕೆ ಮಹತ್ತರವಾದ ಕೊಡುಗೆಯನ್ನು ನೀಡಿದ್ದಾರೆ. ಕನ್ನಡ ಸಾರಸ್ವತ ಲೋಕದಲ್ಲಿ ಕುವೆಂಪು ಅವರು ಮಹಾಕವಿಯೆಂದೇ ಗುರುತಿಸಲ್ಪಟ್ಟಿದ್ದಾರೆ. ಕುವೆಂಪು ಅವರು ಬರೆದ 'ಕಾನೂರು ಹೆಗ್ಗಡತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಎಂಬ ಎರಡು ಬೃಹತ್ತಾದ ಕಾದಂಬರಿಗಳೆರಡು ಕನ್ನಡ ಕಾದಂಬರಿ ಕ್ಷೇತ್ರದ ಧ್ರುವ ನಕ್ಷತ್ರಗಳಾಗಿವೆ. ಅಷ್ಟೆ ಅಲ್ಲ ಈ ಕ್ಷೇತ್ರದಲ್ಲಿ ಅಚ್ಚಳಿಯದ ಸ್ಥಾನವನ್ನು ಪಡೆದಿವೆ. ಕನ್ನಡ ಭಾಷೆ, ವಸ್ತು, ಅಭಿವ್ಯಕ್ತಿ, ಪಾತ್ರಗಳ ಚಿತ್ರಣ, ಪರಿಸರ, ಸಂಸ್ಕೃತಿ–ಸಂಸ್ಕಾರಗಳಾದಿಯಾಗಿ ಜೀವನ ಮೌಲ್ಯಗಳ ದೃಷ್ಟಿಯಿಂದಲೂ ವಿಮರ್ಶಕರ ಮೆಚ್ಚುಗೆಗೆ ಪಾತ್ರವಾಗಿವೆ. ಹಲವು ರೀತಿಯ ಚರ್ಚೆ, ವಿಚಾರ ಮತ್ತು ಸಂವಾದಗಳು ನಡೆದಿವೆ. ಕನ್ನಡ ನೆಲದ ಪ್ರತಿಪಾದನೆಗಳಾಗಿ ಹುಟ್ಟಿಕೊಂಡಿವೆ. ಈ ಎರಡೂ ಕಾದಂಬರಿಗಳು ಕನ್ನಡದ ಸಂಸ್ಕೃತಿಯ ಅನನ್ಯತೆಯ ಪ್ರತಿರೂಪಗಳಾಗಿವೆ. ಮಲೆನಾಡಿನ ಬದುಕನ್ನು ಕುವೆಂಪು ಅವರು ದೃಶ್ಯಮಾಧ್ಯಮವಾಗಿ ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಿರುವರು. ಅವುಗಳ ಸಂಕ್ಷಿಪ್ತಾವಲೋಕನವನ್ನು ಇಲ್ಲಿ ವಿಶ್ಲೇಷಿಸಬಹುದಾಗಿದೆ. ಹಾಗೆಯೇ ಕುವೆಂಪು ಕಾದಂಬರಿಗಳ ಅಧ್ಯಯನದ ಪ್ರಾಮುಖ್ಯತೆಯನ್ನು ಅರಿಯಬಹುದಾಗಿದೆ.

**ಅಧ್ಯಯನದ ಉದ್ದೇಶ ಮತ್ತು ವಿಧಾನ :** ಎರಡು ಕಾದಂಬರಿಗಳಲ್ಲಿ ಮೂಡಿಬಂದ ಪಾತ್ರಗಳ ಅನುಸಂದಾನ, ಮಹತ್ವ ಮತ್ತು ಪ್ರಾಮುಖ್ಯತೆ ತಿಳಿಯುದು. ಕಾದಂಬರಿಗಳಲ್ಲಿ ಚಿತ್ರಿಸಿರುವ ಜೀವನದರ್ಶನವನ್ನು ಪ್ರಸ್ತುತ ಸ್ಪಂದನೆಗೆ ಹೇಗೆ? ಪೂರಕವಾಗವವು ಎಂಬುವುದರ ದೃಷ್ಟಿಕೋನದಲ್ಲಿ ಅಧ್ಯಯನ ಮಾಡುವುದು.

**ಆಕರ :** ಪ್ರಸ್ತುತ ಅಧ್ಯಯನದಲ್ಲಿ ಕಾದಂಬರಿಗಳನ್ನು ಪ್ರಮುಖ ಹಾಗೂ ಪ್ರಾಥಮಿಕ ದತ್ತಾಂಶಗಳನ್ನಾಗಿಸಿಕೊಳ್ಳಲಾಗಿದೆ. ಈ ವಿಷಯಕ್ಕೆ ಸಂಬಂಧಿಸಿದ ಕೃತಿಗಳನ್ನು ಹಾಗೂ ಇತರ ಬರೆಹಗಳ ಅವಲೋಕನದೊಂದಿಗೆ ಈ ಲೇಖನವನ್ನು ಸಿದ್ದಗೊಳಿಸಲಾಗಿದೆ.

**ಕಾದಂಬರಿಗಳ ವಿಶ್ಲೇಷಣಾತ್ಮಕ ಅಧ್ಯಯನ :**

'ಕಾನೂರು ಹೆಗ್ಗಡತಿ' ಕಾದಂಬರಿಯು 1936 ರಲ್ಲಿ ಪ್ರಕಟಗೊಂಡಿತು. ಈ ಕಾದಂಬರಿ 20ನೇ ಶತಮಾನದ ಮೊದಲ ತಲೆಮಾರಿನಲ್ಲಿ ಮಲೆನಾಡು ಪ್ರದೇಶದಲ್ಲಿ ನಡೆದ ಜನಜೀವನದ ಮಾರ್ಪಾಡುಗಳನ್ನು ಚಿತ್ರಿಸುತ್ತ ಹೋಗುತ್ತದೆ. "ಕಾದಂಬರಿ ಆಧುನಿಕ ಯುಗದ ಮಹಾಕಾವ್ಯ ಎಂಬ ಸತ್ಯವನ್ನು ಈ ಕಾದಂಬರಿ ಮೂಲಕ ಅನುಭವಿಸಬಹುದಾಗಿದೆ. ಮನುಷ್ಯ ಜೀವನದ ಒಂದು ಭಾಗದ ನೋಟ ಮಾತ್ರ ಇಲ್ಲಿ ದೊರೆಯದೆ, ಒಂದು ಜನಾಂಗದ ಜೀವನವೇ ತನ್ನ ಸಮಗ್ರತೆಯೊಂದಿಗೆ ಪ್ರಕಟವಾಗುತ್ತದೆ. ಆದ್ದರಿಂದ ಇಲ್ಲಿಯ ಪಾತ್ರ ರಚನೆ ಕೇವಲ ಸ್ವಭಾವ ಲೇಖನದಲ್ಲಷ್ಟೇ ತೃಪ್ತಿಯನ್ನು ಪಡೆಯದೆ, ವ್ಯಕ್ತಿಗಳ ಇರುವಿಕೆಯ ಸಮಗ್ರ ಇತಿಹಾಸವನ್ನೇ ನಿರೂಪಿಸುತ್ತದೆ. ಕೆಲವೊಂದು ಉದ್ದೇಶಗಳನ್ನು ನಿರ್ವಹಿಸುವುದೇ ಪಾತ್ರಗಳ ಕ್ರಿಯೆಯಾಗಿಲ್ಲ. ವಸ್ತು ವಿನ್ಯಾಸ ಆ ವಿಶಿಷ್ಟ ಕ್ರಿಯೆಗಳ ಜೋಡಣೆಯಾಗಿಲ್ಲ. ತಮ್ಮ ಜೀವನ ಶಕ್ತಿಯ ವಿಕಾಸಕ್ಕೆ ಜಗತ್ತು ಸಾಕಾಗದೆ ಈ ವ್ಯಕ್ತಿಗಳು ಕಾದಂಬರಿಯಲ್ಲಿ ಪೂರ್ವಜನ್ಮವನ್ನು ಪಡೆದಂತಾಗಿದೆ. ಜಗತ್ತಿನಲ್ಲಿ ವೈವಿಧ್ಯ ಎಷ್ಟರಮಟ್ಟಿಗೆ ಇರಬಹುದೆಂಬುದರ ಕಲ್ಪನೆ ಇಲ್ಲಿ ಬರುವಂತಿದೆ"[1] ಎಂಬಂತೆ ಗುರುತಿಸುವ ಕೀರ್ತಿನಾಥ ಕುರ್ತಕೋಟಿಯವರ ಮಾತುಗಳಲ್ಲಿ ಈ ಕಾದಂಬರಿಯ ವಸ್ತು ವೈವಿಧ್ಯತೆ ಮತ್ತು ಪಾತ್ರಗಳ ಜೀವಂತಿಕೆಯ ಮಹತ್ವ ಗೊತ್ತಾಗುತ್ತದೆ.

ಕುವೆಂಪು ಅವರು ಈ ಕಾದಂಬರಿಯ ಅರಿಕೆಯಲ್ಲಿ ಈ ರೀತಿಯಾಗಿ ಅಭಿವ್ಯಕ್ತಿಸಿದ್ದಾರೆ "ಈ ನನ್ನ ಪ್ರಥಮ ಕಾದಂಬರಿಯನ್ನು ಓದುವವರಲ್ಲಿ ನನ್ನದೊಂದು ವಿಜ್ಞಾಪನೆ. ಇದನ್ನು ಕಥೆಯ ಕೋಲಾಹಲಕ್ಕಾಗಿ ಓದಬೇಡಿ. ಸಾವಧಾನವಾಗಿ, ಸಚಿತ್ರವಾಗಿ, ಸಜೀವವಾಗಿ ಓದಿ. ಇಲ್ಲಿ ಚಿತ್ರಿತವಾಗಿರುವುದು ಮಲೆನಾಡಿನ ಬಾಳಿನ ಕಡಲಿನಲ್ಲಿ ಒಂದು ಹನಿ. ಅನೇಕರಿಗೆ ಅದು ಸಂಪೂರ್ಣವಾಗಿ ಹೊಸ ಪ್ರಪಂಚವಾಗುತ್ತದೆ. ಹೊಸ ಊರಿಗೆ ಹೋಗುವವರು ಅಲ್ಲಿಯ ಜನ ಮತ್ತು ಜೀವನದ ವಿಚಾರವಾಗಿ ತಟಕ್ಕನೆ ಯಾವ ನಿರ್ಣಯಗಳನ್ನೂ ಮಾಡಿಕೊಳ್ಳದೆ ಸ್ವಲ್ಪಕಾಲ ತಾಳ್ಮೆಯಿಂದಿದ್ದು, ಕ್ರಮೇಣ ಬಳಕೆಯಿಂದ ಜನರನ್ನೂ, ಜೀವನವನ್ನೂ ಪರಿಚಯ ಮಾಡಿಕೊಳ್ಳುವಂತೆ ಈ ಕಾದಂಬರಿಯ ಅರಣ್ಯ ಜಗತ್ತನ್ನು ಪ್ರವೇಶಿಸುವ ವಾಚಕರು ವರ್ತಿಸಬೇಕಾಗುತ್ತದೆ"[2] ಎಂಬ ವಿಷಯವು ಅರಿಯಬೇಕಾದ ಮಹತ್ವದ ಅಂಶವಾಗಿದೆ. ಈ ಕಾದಂಬರಿಯಲ್ಲಿ ಕುವೆಂಪು ಅವರು ಓದುಗ ಸಹೃದಯರ ತಿಳುವು ಮತ್ತು ಆಸಕ್ತಿಯನ್ನು ಮೂಡಿಸುವಲ್ಲಿ ಯಶಸ್ವಿಯಾಗಿರುವರು. ಈ ಕಾದಂಬರಿಯ ಕಥೆಯಲ್ಲಾಗಲಿ, ಪಾತ್ರ ವರ್ಗದವರಲ್ಲಾಗಲಿ ಕಾಣುವುದಿಲ್ಲ. ಆದರೆ ಮಲೆನಾಡಿನ ಮಣ್ಣಿನ ಪ್ರಾದೇಶಿಕತೆಯಲ್ಲಿ ಅದು ಅಡಗಿದೆಯೆಂಬುದನ್ನು ಪರೋಕ್ಷವಾಗಿ ಹೇಳಿದಂತೆ ಕಾಣುತ್ತದೆ. ಯಾಕೆಂದರೆ, ಕುವೆಂಪು ಸೃಷ್ಟಿಸುವ ಕಾಡಿನ ಜಗತ್ತು ಮೇಲ್ನೋಟಕ್ಕೆ ನಿಶ್ಚಲವಾಗಿ ಕಂಡರೂ, ಅದನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಮಲೆನಾಡಿನ ಕೊಂಪೆ ಕೊಂಪೆಯಲ್ಲೂ ಶತಶತಮಾನಗಳಿಂದ ಸ್ಥಿರವಾಗಿದ್ದ ಸಮಾಜವೊಂದು ಚಲಿಸುವ ಚಿತ್ರಣ ಕಣ್ಣಿಗೆ ಗೋಚರಿಸುತ್ತದೆ.

ಕಾದಂಬರಿಯಲ್ಲಿ ಬರುವ ಕಥೆಯ ದೃಷ್ಟಿಯಿಂದ ಮೂರು ಕುಟುಂಬಗಳು ಪ್ರಮುಖವಾಗುತ್ತವೆ. ಕಾನೂರು ಚಂದ್ರಯ್ಯಗೌಡರ ಕುಟುಂಬ, ಮುತ್ತಳ್ಳಿ ರಾಮಯ್ಯಗೌಡರ ಕುಟುಂಬ ಹಾಗೂ ಸೀತೆಮನೆ ಸಿಂಗಪ್ಪಗೌಡರ ಕುಟುಂಬ. ಈ ಮೂರು ಕುಟುಂಬಗಳ ಅಸ್ತಿತ್ವದ ಪ್ರಶ್ನೆಯೊಂದಿಗೆ ಕಾದಂಬರಿ ತನ್ನ ಕಥಾ ಹರವನ್ನು ಪಡೆದುಕೊಳ್ಳುತ್ತದೆ. "ಫ್ಯೂಡಲ್ ವ್ಯವಸ್ಥೆಯ ಒಂದು ತುದಿಯಲ್ಲಿ ಈ ಮೂರು ಕುಟುಂಬಗಳು ಇದ್ದರೆ, ಅದರ ಇನ್ನೊಂದು ತುದಿಯಲ್ಲಿ ಈ ಕುಟುಂಬದ ಜೀತದಾಳುಗಳಿದ್ದಾರೆ. ಈ ಜೀತದಾಳುಗಳು ಬೇರೆ ಬೇರೆ ಜಾತಿಗಳಿಂದ ಬಂದವರಾಗಿದ್ದು, ಅವುಗಳ ಶ್ರೇಣಿಗಳಿಗೆ ಸಾಪೇಕ್ಷವಾದ ಜೀವನಮಟ್ಟವನ್ನು ಅನುಭವಿಸುತ್ತಾರೆ. ವ್ಯವಸಾಯ, ಬೇಟೆ– ಮುಖ್ಯವಾಗಿ ಈ ಎರಡೂ ಚಟುವಟಿಕೆಗಳಲ್ಲಿ ಅವರೆಲ್ಲ ತಮ್ಮ ವರ್ಗ ಮತ್ತು ವರ್ಣ ಸ್ಥಿತಿಗನುಗುಣವಾಗಿ ತೊಡಗಿಕೊಳ್ಳುತ್ತಾರೆ. ಇವರ ಮಧ್ಯೆ ಸೇರೆಗಾರರು, ಕಳ್ಳಂಗಡಿಯ ಯಜಮಾನ ಇಂಥ ವ್ಯಕ್ತಿಗಳಿದ್ದು ಕಾನೂರು–ಮುತ್ತಳ್ಳಿ–ಸೀತೆಮನೆ ಜೀವನದ ಅವಿಭಾಜ್ಯ ಅಂಗಗಳೇ ಆಗಿ ಹೋಗಿದ್ದಾರೆ"[3] ಎಂಬ ಟಿ.ಪಿ ಅಶೋಕ ಅವರು ಚರ್ಚಿಸಿದ ವಿಷಯ ವಿಶ್ಲೇಣೆಯು, ಕುಟುಂಬ ವ್ಯವಸ್ಥೆ, ಕೃಷಿ, ಬಡತನ, ಜೀತ ಪದ್ಧತಿ, ಮೇಲು–ಕೀಳು ಜಾತಿಯ ಸಂಕಷ್ಟಗಳ ಹಿನ್ನೆಲೆಯಲ್ಲಿ ಒಪ್ಪಬಹುದಾಗಿದೆ.

ಪರಿಸರದೊಂದಿಗೆ ಮಾನವನ ಅವಿನಾಭಾವ ಸಂಬಂಧವನ್ನು ಮನೋವೈಜ್ಞಾನಿಕತೆಯಲ್ಲಿ ಚಿತ್ರಿಸಿರುವರು. ಮಲೆನಾಡಿನ ಈ ಸಾಂಪ್ರದಾಯಿಕ ಕುಟುಂಬ ವ್ಯವಸ್ಥೆಯಲ್ಲಿ ಪ್ರಾಚೀನ ಮತ್ತು ಹೊಸತನದ ಸಂಬಂಧಗಳ ಸಂಘರ್ಷವನ್ನು ಕುವೆಂಪು ಅವರು ಅತ್ಯಂತ ಮಾರ್ಮಿಕವಾಗಿ ಬಿಂಬಿಸುತ್ತ ಹೋಗಿದ್ದಾರೆ. "ಆ ನಾಡಿನ ಒಕ್ಕಲಿಗರಲ್ಲಿ ಬಹು ಪುರಾತನದಿಂದಲೂ ಹೆಂಡ, ಕಳ್ಳು ಮೊದಲಾದ ಮಾದಕ ಪದಾರ್ಥಗಳನ್ನು ಸೇವಿಸುವುದು ಅತಿ ಸಾಮಾನ್ಯವಾದ ರೂಢಿಯಾಗಿತ್ತು. ಈಗಲೂ ಅದು ಸಂಪೂರ್ಣವಾಗಿ ತೊಲಗಿಲ್ಲ. ಮೊದಲು ಎಲ್ಲೆಲ್ಲಿಯೋ ಬಹಿರಂಗವಾಗಿ ನಡೆಯುತ್ತಿದ್ದುದು ಈಗ ಅಲ್ಲಲ್ಲಿ ಅಂತರಂಗವಾಗಿ ಸಾಗುತ್ತಿದೆ. ಅಂತೂ ಮದ್ಯಪಾನ ಮಾಡುವುದು ನಾಚಿಗೆಗೇಡಿನ ಕೆಲಸವೆಂದೆನೂ ಎಲ್ಲರಿಗೂ ಗೊತ್ತಾಗಿದೆ. ಕಾರಣವೇನೆಂದರೆ, ಸುಮಾರು ಮೂವತ್ತು, ಮೂವತ್ತೈದು ವರ್ಷಗಳ ಹಿಂದೆ ನಾಡಿನ ಒಕ್ಕಲಿಗ ಮುಖಂಡರಲ್ಲಿ ಒಂದು ಚಳುವಳಿ ಎದ್ದಿತು. ಆ ಚಳುವಳಿಗೆ ಕ್ರೈಸ್ತ್ ಪಾದ್ರಿಗಳ ಉಪದೇಶವೂ, ಮೈಸೂರು ಸರಕಾರದ 'ಮಲೆನಾಡು ಅಭಿವೃದ್ಧಿ ಇಲಾಖೆ'ಯ ಬೋಧನೆಯೂ, ಬ್ರಿಟಿಷ್ ಆಳ್ವಿಕೆಯಿಂದುಂಟಾದ ನಾಗರೀಕತೆಯ ಆಗಮನವೂ, ಕಾಫಿ, ವೈನು, ವಿಸ್ಕಿ ಇತ್ಯಾದಿಯಾದ ಪಾನೀಯಗಳ ಆಮದೂ, ಸನ್ನಿವೇಶ ಪ್ರಭಾವದಿಂದ ಜನರಲ್ಲಿ ಸ್ವಾಭಾವಿಕವಾಗಿಯೇ ಉತ್ಪನ್ನವಾದ ಜಾಗ್ರತಿಯೂ ಕಾರಣಗಳಾದವೆಂದು ಊಹಿಸಬಹುದು"[4] ಎಂಬಂತೆ ಕಾಲಮಾನದ ಬದಲಾವಣೆಯ ಪ್ರಕ್ರಿಯೆಯೂ ಪ್ರಾರಂಭವಾದುದರ ಹಿನ್ನೆಲೆಯ ವಿತ್ರಣ ಕಾಣಬಹುದು. ಹೀಗೆ ಆಧುನೀಕತೆಯ ಪ್ರಭಾವ ಎಲ್ಲ ಸಮುದಾಯದ ವ್ಯಾಪಿಸಿರುವುದನ್ನು ಎತ್ತಿ ತೋರಿರುವುದು ಕಾಣಬಹುದು.

ಆಧುನಿಕತೆಯನ್ನು ಬಯಸುವ ಈ ಕಾದಂಬರಿಯ ಪ್ರಮುಖ ಕೇಂದ್ರ ಪಾತ್ರಗಳಲ್ಲಿ ಒಂದಾದ ಹೂವಯ್ಯನ ಪಾತ್ರವು ಎಲ್ಲರ ಆಕರ್ಷಣೆಗೆ ಒಳಗಾಗುತ್ತದೆ. ಅವನಿಂದಾಗಿ ಎಷ್ಟೋ ಜನರು ಬದಲಾಗುತ್ತಾರೆ. "ಹೂವಯ್ಯನ ಸಂಪರ್ಕದಿಂದ ಇದ್ದಕ್ಕಿದ್ದ ಹಾಗೆ ಸೋಮನಿಗೂ ನಾಗರೀಕತೆ ಬಂದು ಬಿಟ್ಟಿತು. ಕೆಲವು ತಿಂಗಳುಗಳ ಹಿಂದೆ ತಮ್ಮೆದುರು 'ಒಡೆಯಾ ಒಡೆಯಾ' ಎಂದು ಹಲ್ಲು ಕಿರಿಯುತ್ತಿದ್ದವನು ಈಗ ಹೀಗೆ ತಲೆಯೆತ್ತಿ ನಿಂತು ಮಾತಾಡುತ್ತಿದ್ದುದನ್ನು ಕಂಡು ಸೇರೆಗಾರರ ಮೈ ಕುದಿಯ ಹತ್ತಿತ್ತು"[5] ಎಂಬುದನ್ನು ಗಮನಿಸಿದಾಗ ಸೇರೆಗಾರರು ಈ ಕೆಳವರ್ಗದ ವ್ಯಕ್ತಿಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡೇ ದೌರ್ಜನ್ಯವೆಸಗುತ್ತಿದ್ದರೆಂಬ ಅಂಶವು ತಿಳಿಯುತ್ತದೆ. ಹೊಸತನವನ್ನು ಹೊತ್ತು ಬರುವ ಹೂವಯ್ಯ ಮತ್ತು ರಾಮಯ್ಯರು ಈ ಜಡ ಸಮಾಜವನ್ನು ಬದಲಾಯಿಸುವ ಪ್ರಯತ್ನ ಮಾಡುತ್ತಾರೆ. ಹೂವಯ್ಯ ತಾನು ಸಂಪಾದಿಸಿದ ಜ್ಞಾನಾರ್ಜನೆಯ ಪ್ರಭಾವದಿಂದಲೇ ಇತರರನ್ನು ತನ್ನತ್ತ ಸೆಳೆದು, ಅವರ ಜೀವನದ ಬದಲಾವಣೆಗೆ ಕಾರಣಕರ್ತನಾಗುತ್ತಾನೆ. ವ್ಯವಸಾಯ ಪ್ರಧಾನವಾದ ಗ್ರಾಮೀಣ ಬದುಕಿನಲ್ಲಿ ಹೂವಯ್ಯ ಪ್ರವೇಶವಾದೊಡನೆ, ಕಾದಂಬರಿಯ ವಸ್ತುವಿನ ಸ್ವರೂಪ ತೆರೆದುಕೊಳ್ಳುತ್ತ ಹೋಗುವ ರೀತಿಯನ್ನು ಈ ಕಾದಂಬರಿಯಲ್ಲಿ ಗಮನಿಸಬಹುದಾಗಿದೆ.

ಇಲ್ಲಿ ಪ್ರಾದೇಶಿಕತೆ, ವಸ್ತು ವಿನ್ಯಾಸ, ಭಾಷಾ ಸಾಮರ್ಥ್ಯ, ಶೈಲಿಯ ವೈಶಿಷ್ಟ್ಯ, ಇತ್ಯಾದಿ ಅಂಶಗಳ ದೃಷ್ಟಿಯಿಂದ ಈ ಕಾದಂಬರಿ ಮಹತ್ವದ್ದಾಗಿದೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯು 1967 ರಲ್ಲಿ ಪ್ರಕಟಗೊಂಡಿತು. ಈ ಕಾದಂಬರಿಯನ್ನು ಕುವೆಂಪು ಅವರು 'ಕಾನೂರು ಹೆಗ್ಗಡತಿ'ಯ ನಂತರ ಬರೆದಿದ್ದಾರೆ. ಆದರೆ ಇದರ ಕಥೆ 'ಹೆಗ್ಗಡತಿ'ಯ ಕಥೆಗಿಂತ ಬಹು ಹಿಂದಿನ ಕಾಲಕ್ಕೆ ಸೇರುತ್ತದೆ. ಆಧುನೀಕತೆ ಇನ್ನು ಮಲೆನಾಡಿನ ಗ್ರಾಮ ಸಮಾಜಕ್ಕೆ ಮೊದಲ ಹೆಜ್ಜೆಗಳನ್ನು ಇಡುತ್ತಿದ್ದ ಕಾಲಘಟ್ಟ ಇದಾಗಿದೆ. ಆದುದರಿಂದ ಆಧುನೀಕತೆಯ ಮುಖಾ–ಮುಖಿತನ ಇಲ್ಲಿ ಬೇರುಮಟ್ಟದ ಮತ್ತು ಮೂಲಭೂತವಾದ ಕ್ರಿಯೆಯಾಗಿ ಕಾಣುತ್ತದೆ. ಇದು ನಾಯಕನಿಲ್ಲದ ಕೃತಿಯೆನಿಸಿದೆ. ತನ್ನ ಬಹು ಆಯಾಮದ ಕಥನ ಕ್ರಮದಿಂದಾಗಿ, ಆಧುನೀಕತೆಯ ಮುಖಾ–ಮುಖಿತನದ ರೀತಿ–ನೀತಿಗಳು ಕನ್ನಡಕ್ಕೆ ಹೊಸತೆಂಬಂತೆ ಈ ಕಾದಂಬರಿಯಲ್ಲಿ ಚಿತ್ರಿಸಲ್ಪಟ್ಟಿವೆ.

ಮಲೆನಾಡಿನ ವೈವಿಧ್ಯಮಯವಾದ ಬದುಕನ್ನು ತನ್ನ ವಿವಿಧ ಬಗೆಯ ಸ್ತರಗಳಲ್ಲಿ ಜೀವಂತವಾಗಿ ಕಟ್ಟಿಕೊಡುವ ವಿಶಿಷ್ಟ ಕಾದಂಬರಿ ಇದಾಗಿದೆ. ಮಾನವನಲ್ಲಿ ಹುದುಗಿರುವ ಒಳ ತಲ್ಲಣಗಳನ್ನು ಪಾತ್ರಗಳ ಮೂಲಕ ಅಭಿವ್ಯಕಿಸಿರುವುದು ಈ ಕಾದಂಬರಿಯ ವಿಶೇಷತೆಯಾಗಿದೆ. ಒಂದು ಪರಿಸರದ ಸಮಗ್ರ ಜೀವನದ ಮಜಲುಗಳನ್ನು ಕಟ್ಟಿಕೊಡುವುದರ ಮೂಲಕ ಅಲ್ಲಿಯ ಪಾತ್ರಗಳು, ಪ್ರಾಣಿಗಳು, ನಿಸರ್ಗದೊಳಗಿನ ಜೀವಸಂಕುಲದೊಂದಿಗಿನ ಜೀವನ ನಿರ್ವಹಣೆಯನ್ನು, ಅಲ್ಲಿಯ ಸುಖ–ದುಃಖ ಹಾಗೂ ನಿತ್ಯ ಬದುಕಿನ ತಹತಹಗಳ ಸ್ವಾರಸ್ಯಗಳೆಲ್ಲವನ್ನು ಆಯಾ ಪಾತ್ರಗಳ ಮೂಲಕ ನಮ್ಮೊಂದಿ ಬದುಕಿಸಿರುವುದು ಬಹು ದೊಡ್ಡ ಜೀವನದ ಪಾಠವಾಗಿದೆ.

'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಹರವು 'ಕಾನೂರು ಹೆಗ್ಗಡತಿ'ಗಿಂತ ವಿಶಾಲವಾಗಿದೆ. ಮಲೆನಾಡಿನ ಜೀವನದ ವಿವರಗಳು ಇಲ್ಲಿ ಇನ್ನೂ ಹೆಚ್ಚು ಸಮೃದ್ಧವಾಗಿವೆ. ಅನೇಕ ವಿವರಗಳಲ್ಲಿ ಸಾಮ್ಯತೆ ಇರುವುದಾದರೂ, ನೋಡುವ ನೋಟ ಕೊಂಚ ಬೇರೆಯಾಗಿದೆ. ನಂಬಿಕೆಗಳ ಲೋಕ ಇಲ್ಲಿ ಸರಳವಾಗಿಲ್ಲ: ಹೆಚ್ಚು ಸಮಸ್ಯಾತ್ಮಕವಾಗಿದೆ. ಪಾತ್ರಗಳು ಹೆಚ್ಚು ಚಲನಶೀಲವಾಗಿವೆ. 'ಕಾನೂರು ಹೆಗ್ಗಡತಿ'ಯಲ್ಲಿ ಹೂವಯ್ಯ ಎಲ್ಲರಿಗಿಂತ ಮುಖ್ಯ, ವಿಶಿಷ್ಟ ಎಂಬ ಧ್ವನಿಯಿದೆ. ಆದರೆ 'ಮಲೆಗಳಲ್ಲಿ ಮದುಮಗಳು' ಕಾದಂಬರಿಗೆ ಹಾಗೇ ಒಂದೇ ಕೇಂದ್ರವೆಂಬುದಾಗಲಿ, ಒಂದೇ ಕೇಂದ್ರ ಪಾತ್ರ ಅಥವಾ ಕೇಂದ್ರ ಪ್ರಜ್ಞೆ, ಎಂಬುದಾಗಲಿ ಇಲ್ಲ.

ಇಲ್ಲಿ ಮುಕುಂದಯ್ಯನಿಗಿರುವಷ್ಟೇ ಪ್ರಾಮುಖ್ಯತೆ ಗುತ್ತಿ, ಐತ, ಚೀಂಕ್ರ, ಸುಬ್ಬಣ್ಣ ಹೆಗ್ಗಡೆ, ದೇವಯ್ಯ ಎಲ್ಲರಿಗೂ ಇದೆ. ಚಿನ್ನಮ್ಮನಿಗಿರುವಷ್ಟೇ ಪ್ರಾಮುಖ್ಯ ಪೀಂಚಲು, ತಿಮ್ಮಿ, ಕಾವೇರಿ ಮುಂತಾದವರಿಗೂ ಇದೆ"[6] ಎಂಬ ಟಿ.ಪಿ ಅಶೋಕರ ಮಾತುಗಳು ಈ ಕಾದಂಬರಿಯ ಹಿನ್ನೆಲೆಯಲ್ಲಿ ಹೆಚ್ಚು ಗಮನಾರ್ಹವಾಗಿವೆ. ಯಾಕೆಂದರೆ, ಇಲ್ಲಿ ಪ್ರತಿಯೊಂದಕ್ಕೂ ಮಹತ್ವವಿದೆ. ಕುವೆಂಪು ಅವರೇ ಕಾದಂಬರಿಯ ಆರಂಭದಲ್ಲಿ ಹೇಳಿದಂತೆ, 'ಇಲ್ಲಿ ಯಾರೂ ಮುಖ್ಯರಲ್ಲ; ಯಾರೂ ಅಮುಖ್ಯರಲ್ಲ; ಯಾವುದು ಯಕಃಶ್ಚಿತವಲ್ಲ! ಇಲ್ಲಿ ಯಾವುದಕ್ಕೂ ಮೊದಲಿಲ್ಲ; ಯಾವುದಕ್ಕೂ ತುದಿಯಿಲ್ಲ; ಯಾವುದೂ ಎಲ್ಲಿಯೂ ನಿಲ್ಲುವುದೂ ಇಲ್ಲ; ಕೊನೆ ಮುಟ್ಟುವುದೂ ಇಲ್ಲ! ಇಲ್ಲಿ ಅವಸರವೂ ಸಾವಧಾನದ ಬೆನ್ನೇರಿದೆ! ಇಲ್ಲಿ ಎಲ್ಲಕ್ಕೂ ಇದೆ ಅರ್ಥ: ಯಾವುದೂ ಅಲ್ಲ ವ್ಯರ್ಥ: ನೀರೆಲ್ಲವೂ ತೀರ್ಥ!' ಎಂದು ಘೋಷಿಸಿದ್ದಾರೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಐದು ಮನೆತನಗಳ ಸಂಬಂಧ ಮತ್ತು ಘಟನೆಗಳ ಬೆಸುಗೆ ಇದೆ. ಸಿಂಬಾವಿ, ಬೆಟ್ಟಳ್ಳಿ, ಕೋಣೂರು, ಹೂವಳ್ಳಿ, ಹಳೆಮನೆ ಈ ಐದು ಮನೆತನಗಳ ನಡುವಣ ಸಂಬಂಧ ಅನಾವರಣಗೊಂಡಿದೆ. ಅಂತೆಯೇ ಈ ಮನೆತನಗಳ ಸೇವೆ ಮಾಡುವ ಜೀತದಾಳುಗಳ ಮದುವೆ ಮತ್ತು ಪ್ರಣಯ ಪ್ರಸಂಗಗಳ ಹೂರಣವೂ ಇವರೊಟ್ಟಿಗೆ ಕಾಣಸಿಗುತ್ತದೆ. "ಮಲೆನಾಡಿನ ಗೌಡರ ಜೀವನ ವಿಧಾನ, ಅವರ ಮೂಢನಂಬಿಕೆಗಳು, ಟೊಳ್ಳು ಪ್ರತಿಷ್ಠೆಗಳು, ದರ್ಪ–ದಬ್ಬಾಳಿಕೆಗಳು, ಮೃಗಿಯವೋ ಎನ್ನಿಸುವಂತಹ ಪ್ರಣಯ ಸಾಹಸಗಳು, ಅವರ ಹೆಂಗಸರ ಅಸ್ವಾತಂತ್ರ ಬಾಳು ಹಾಗೂ ಮುಗ್ಧತೆ: ಆ ಗೌಡರ ಹೊಲ–ಗದ್ದೆಗಳಲ್ಲಿ ಹಳೇ ಪೈಕದವರು, ಹೊಲೆಯರು, ದೀವರು, ಬಿಲ್ಲವರು–ಮುಂತಾದವರ ವಿಶಿಷ್ಟ ರೀತಿ–ರಿವಾಜುಗಳು, ಇವರನ್ನು ನಂಬಿ ಬದುಕುವ ಮತ್ತು ಶೋಷಿಸಿ ಬದುಕುವ ಬ್ರಾಹ್ಮಣರು, ಮುಸ್ಲಿಮರು, ಹೊಸ ವಿಚಾರಗಳ ನವನಾಗರೀಕತೆಯ ಪ್ರಸಾರದ ಹೆಸರಿನಲ್ಲಿ ಮತಾಂತರ ಕಾರ್ಯದಲ್ಲಿ ನಿರತರಾಗಿರುವ ಪಾದ್ರಿಗಳು, ಕಾಡಿನ ನಾಡಿನ ದಟ್ಟವಾದ ಅನಿವಾರ್ಯ ಸಂಗಿಯಾದ ಚಿತ್ರಣ–ಹೀಗೆ ಹಲವು ಹತ್ತು ರೀತಿಯಲ್ಲಿ ಬದುಕು ಅನಾವರಣಗೊಂಡಿದೆ ಇಲ್ಲಿ"[7] ಎಂಬಂತೆ ಇಲ್ಲಿನ ಪಾತ್ರಗಳು ಪ್ರಕೃತಿಯಲ್ಲಿ ಒಂದಾಗಿ ಜೀವಂತಿಕೆಯನ್ನು ಪಡೆಯುತ್ತವೆ.

ಗುತ್ತಿ–ತಿಮ್ಮಿ, ಐತ–ಪೀಂಚಲು, ಮುಕುಂದಯ್ಯ-ಚಿನ್ನಮ್ಮ ಈ ಪ್ರಣಯ ಜೋಡಿಗಳು ಕಾದಂಬರಿಯಲ್ಲಿ ಓದುಗರ ಗಮನವನ್ನು ಸೆಳೆಯುತ್ತವೆ. ಗುತ್ತಿಯ ಪಾತ್ರ ಚಿತ್ರಣವನ್ನು ನೋಡಿ, "ಕೊಳೆ ಸರ್ವವ್ಯಾಪ್ತಿಯಾಗಿದ್ದರೂ, ಷೋಕಿಯಾಗಿದ್ದನು. ತಲೆಗೆ ಒಂದು ಕೆಂಪು ವಸ್ತ್ರ ಸುತ್ತಿದ್ದನು. ಮೈಗೊಂದು ಕಸೆ ಲುಂಗಿ ಹಾಕಿದ್ದನು. ಪಂಜೆಯ ತುದಿ ಮೊಳಕಾಲನ್ನು ದಾಟಿತ್ತು. ಕಿವಿಗೆ ಬೇರೆ ಒಂಟಿ! ಒಂಟಿಗಳನ್ನು ಹೊಸದಾಗಿ ಹಾಕಿರಲಿಲ್ಲವಾದರೂ ಹೊಸ ವೇಷದಿಂದ ಅವುಗಳಿಗೊಂದು ಹೊಸ ಷೋಕಿ ಬಂದಿತ್ತು. ಎಲ್ಲಕ್ಕೂ ತಿಲಕಪ್ರಾಯವಾಗಿ ಮುಖ ಕ್ಷೌರ. ಹೊಲೆಯನಾದರೂ ಬೆಳ್ಳಗಿದ್ದುದರಿಂದ ಮಲೆಯನಂತೆ ಕಾಣುತ್ತಿದ್ದನು. ಹೆಗಲ ಮೇಲೆ ಮಡಿಸಿ ಹಾಕಿಕೊಂಡಿದ್ದ ಕಂಬಳಿಕೊಪ್ಪೆ, ಅವನು ಮಳೆಗೆ ತಯಾರಾಗಿ ಹೊರಟ್ಟಿದ್ದನ್ನು, ಬಗಲಲ್ಲಿ ಇರಿಸಿಕೊಂಡಿದ್ದ ಬಗನಿಯ ಮರದ ಕರಿಯ ದೊಣ್ಣೆ ಹೊಡೆದಾಟಕ್ಕೂ ಕೂಡ ಅವನು ಸಿದ್ಧನಾಗಿದ್ದಾನೆ, ಎಂಬುದನ್ನು ಸೂಚಿಸುತ್ತಿದ್ದವು"[8] ಎಂಬಲ್ಲಿ ಸಿಂಬಾವಿ ಭರಮೈ ಹೆಗ್ಗಡೆಯವರ ಜೀತದಾಳಾದ ಗುತ್ತಿಯ ಪಾತ್ರ ಚಿತ್ರಣ ಅತ್ಯಂತ ಶಕ್ತಿಯುತ್ತಾಗಿ ನಮ್ಮ ಕಣ್ಮುಂದೆ ನಿಲ್ಲುತ್ತದೆ.

ಐತ–ಪೀಂಚಲು ಈ ಕಾದಂಬರಿಯಲ್ಲಿ ಅತ್ಯಂತ ಆಕರ್ಷಣೀಯ ಪಾತ್ರಗಳಾಗಿವೆ. ಐತನ ಮಾತುಗಾರಿಕೆ, ಮಡದಿಯ ಬಗೆಗೆ ಹೆಚ್ಚಿನ ಉತ್ಕಟವಾದ ಪ್ರೇಮ, ಅವನ ಗುಣಗಳು ಓದುಗರನ್ನು ಆತ್ಮೀಯವಾಗಿ ಸೆಳೆಯುತ್ತವೆ. ಪೀಂಚಲುವಿನ ಗುಣ ಮತ್ತೊಂದು ರೀತಿಯದಾಗಿದೆ. ಅವಳು ಮಹಾಸ್ವಾಭಿಮಾನಿ, ಪ್ರಣಯ ಚತುರೆ, ಯುಕ್ತಿವಂತೆ, ಸಾಹಸಪ್ರಿಯೆ, ಸ್ನೇಹಶೀಲೆ, ಸೇವಾನಿಷ್ಠೆಯಿಂದಾಗಿ ಅವಳು ಗಮನ ಸೆಳೆಯುತ್ತಾಳೆ. ಎಲ್ಲೇ ತೊಂದರೆಯಿರಲಿ, ಯಾರಿಗೆ ಕಷ್ಟಬರಲಿ ಅಂತಹದರಲ್ಲಿ ಅವಳು ಸಹಾಯಹಸ್ತ ಚಾಚುತ್ತಾಳೆ.

ಇದಕ್ಕೆ ಮುಕುಂದಯ್ಯ ಮತ್ತು ಚಿನ್ನಮ್ಮನ ಬಾಳು ಸಾಕಾರಗೊಳ್ಳುವಲ್ಲಿ ಅವಳ ಪಾತ್ರ ಎದ್ದು ಕಾಣುತ್ತದೆ. "ಮುಕುಂದಯ್ಯ ಓದು–ಬರಹ ಬಲ್ಲವನು. ಹಿರಿಯರಲ್ಲಿ ಗೌರವ ಆದರ ಉಳ್ಳವನು. ಕಿರಿಯನಾದ ಧರ್ಮು, ತಿಮ್ಮು, ವಾಸು, ಕಾಡು ಮುಂತಾದವರಲ್ಲಿ ಆತ್ಮೀಯವಾದ ಅಕ್ಕರೆಯುಳ್ಳವನು. ಚಿನ್ನಮ್ಮನನ್ನು ಮಡದಿಯಾಗಿ ಪಡೆಯುವ ಕಾರ್ಯದಲ್ಲಿ ಐತ–ಪೀಂಚಲು ಗುತ್ತಿ ಮುಂತಾದವರೆಲ್ಲರ ಸಹಾಯ–ಸಹಕಾರಗಳನ್ನು ಪಡೆದುಕೊಳ್ಳುವಲ್ಲಿ ಅವನು ತೋರುವ ಸಾಹಸ, ಅದಕ್ಕಾಗಿ ಮನೆಯ ಹಿರಿಯರನ್ನು ಎದುರು ಹಾಕಿಕೊಳ್ಳಲೂ ಹಿಂಜರಿಯದ ಅವನ ಧೈರ್ಯ, ತಾನು ಮೇಲುಜಾತಿಯವನಾಗಿದ್ದರೂ ಕೀಳುಜಾತಿಯೆನಿಸಿಕೊಂಡ ಆಳು ಮಕ್ಕಳೊಡನೆ ಅವನು ತೋರುವ ಪ್ರೀತಿ, ಸ್ನೇಹ, ಸಲುಗೆ, ದೇವಯ್ಯನ ಮತಾಂತರವನ್ನು ತಪ್ಪಿಸುವಲ್ಲಿ ಅವನು ಪ್ರದರ್ಶಿಸುವ ದಿಟ್ಟತನ, ಅಕ್ಕ ರಂಗಮ್ಮ ಹಾಗೂ ಸೋದರಳಿಯ ಧರ್ಮುವಿನ ಸಂತಾಪವನ್ನು ನೀಗುವಲ್ಲಿ ಅವನು ವಹಿಸುವ ಪಾತ್ರ ತುಂಬ ಸಮುಚಿತ ಅಭಿವ್ಯಕ್ತಿಯನ್ನು ಪಡೆದಿವೆ"[9] ಎಂದು ಎಚ್.ಜೆ.ಲಕ್ಕಪ್ಪಗೌಡ ಅವರು ಸರಿಯಾಗಿಯೇ ಗುರುತಿಸಿದ್ದಾರೆ.

ಕಾದಂಬರಿಯಲ್ಲಿ ಬರುವ ಪ್ರತಿಯೊಂದು ಪಾತ್ರವೂ ಮಲೆನಾಡಿನ ಮಣ್ಣಲ್ಲಿ ಮಿಂದೆದ್ದು ಸೃಷ್ಟಿ ಸಹಜವಾದ ಜೀವಂತಿಕೆಯನ್ನು ಪಡೆದಿವೆ. ಆಧುನಿಕ ಯುಗದಲ್ಲಿ ಮಹಾಕಾವ್ಯವೊಂದು ಕಾದಂಬರಿ ರೂಪ ಪಡೆದಿರುವ ರೀತಿಯನ್ನು 'ಮಲೆಗಳಲ್ಲಿ ಮದುಮಗಳು' ಎಂಬ ಕಾದಂಬರಿಯಲ್ಲಿ ಕಾಣಬಹುದಾಗಿದೆ. ಇಲ್ಲಿ ಲೌಕಿಕ–ಅಲೌಕಿಕ, ಭೌತಿಕ–ಅಭೌತಿಕ, ಇಂದ್ರಿಯ–ಅತೀಂದ್ರಿಯ ವ್ಯಾಪಾರಗಳೆಲ್ಲವೂ ಮೇಳೈಸಿವೆ. ಆಧ್ಯಾತ್ಮಿಕ ಹಾಗೂ ಸಾಮಾಜಿಕ ಬದುಕನ್ನು ಒಂದು ಸುಂದರವಾದ ಚೌಕಟ್ಟಿನಲ್ಲಿರಿಸಿ, ಅದರ ಕಾಂತಿಯನ್ನು ಮತ್ತು ಚೈತನ್ಯವನ್ನು ಕುವೆಂಪು ಅವರು ಈ ಕಾದಂಬರಿಯ ಮುಖಾಂತರ ಸಾಕಾರಗೊಳಿಸಿದ್ದು ವಿಶೇಷವಾಗಿದೆ. ಆದುದರಿಂದಲೇ 'ಮಲೆಗಳಲ್ಲಿ ಮದುಮಗಳು' ಕನ್ನಡ ಕಾದಂಬರಿ ಕ್ಷೇತ್ರದ ಅಗ್ರಮಾನ್ಯ ಕೃತಿಗಳಲ್ಲಿ ಒಂದೆನಿಸಿದೆ.

**ಸಮಾರೋಪ:** ಒಟ್ಟಿನಲ್ಲಿ ಕುವೆಂಪು ಅವರ ಕನ್ನಡ ಕಾದಂಬರಿ ರಚನೆಯ ರೀತಿ ವಿಶಿಷ್ಟವಾದುದು. ಇಲ್ಲಿ ಅವರ ಕಾದಂಬರಿಗಳ ಹಿನ್ನೆಲೆ, ವಸ್ತು, ಆಶಯಕ್ಕನುಗುಣವಾದ ಸಂಕ್ಷಿಪ್ತ ವಿಶ್ಲೇಷಣೆಯನ್ನು ಮಾಡಲಾಗಿದೆ. ಪಾತ್ರಗಳು, ಭಾಷೆ, ವಿಷಯ, ಕಥಾ ತಂತ್ರ, ಸಂದರ್ಭಗಳ ಸಂಗಮ, ನಡೆಯುವ ಜೀವನದ ಜೀವಂತ ಸನ್ನಿವೇಶಗಳು ನಮ್ಮೊಳಗೆ ಅಥವಾ ನಮ್ಮೊಂದಿಗೆ ಇರುತಿರುತ ಹೊರ ಪಾತ್ರಗಳಾಗಿ ಅನುಭವಿಸುವ ತಹತಹ ಹಾಗೂ ಜೀವನ ನಡೆಸುವಾಗ ಎದುರಾಗುವ ಘಟನೆಗಳನ್ನು ಸ್ವೀಕರಿಸಿ, ಎದುರಿಸಿ, ಅನುಸರಿಸಿ ಬಾಳು ಸಾಗಿಸುವ ಇಲ್ಲಿಯ ಪಾತ್ರಗಳ ಬದುಕಿನ ಜೀವಂತಿಕೆ ಕಾಲಾತೀತವಾದದ್ದು, ಎನ್ನುವುದು ಕಾದಂಬರಿಗಳ ಓದಿನೊಂದಿಗೆ ಓದುಗನ ಅಧ್ಯಯನದ ವಿಸ್ತಾರಕ್ಕೆ ನಿಲುಕಬಲ್ಲ ಅನುಭವಗಳು, ಕುವೆಂಪು ಅವರು ತಮ್ಮ ಕಾದಂಬರಿಯಲ್ಲಿ ಅವರೆ ಸೃಷ್ಟಿಸಿರುವ ಮಾನವನ ಅಂತರಂಗದಲ್ಲಿ ಅಡಗಿರುವ ಜಿಜ್ಞಾಸೆಗಳ ಈಡೇರಿಕೆಯ ಮತ್ತೊಂದು ಪ್ರಪಂಚಕ್ಕೆ ಕರೆದುಕೊಂಡು ಹೋಗುವುದೆ ಕಾದಂಬರಿಗಳ ಪ್ರಾಮುಖ್ಯತೆಯಾಗಿದೆ.

***ಕೊನೆ ಟಿಪ್ಪಣಿಗಳು :***

1. *ಕೀರ್ತಿನಾಥ ಕುರ್ತಕೋಟಿ, ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಪುಟ–226, ಮು–2016*
2. *ಕುವೆಂಪು, ಕಾನೂರು ಹೆಗ್ಗಡತಿ, ಪು–11, ಅರಿಕೆ, ಮು–2017*
3. *ಟಿ.ಪಿ. ಅಶೋಕ, ಕುವೆಂಪು ಕಾದಂಬರಿ–ಎರಡು ಅಧ್ಯಯನಗಳು, ಪುಟ–12, ಮು–2011*
4. *ಕುವೆಂಪು, ಕಾನೂರು ಹೆಗ್ಗಡತಿ, ಪುಟ–192, ಮು–2017*
5. *ಕುವೆಂಪು, ಕಾನೂರು ಹೆಗ್ಗಡತಿ, ಪುಟ–402, ಮು–2017*
6. *ಟಿ.ಪಿ. ಅಶೋಕ, ಕುವೆಂಪು ಕಾದಂಬರಿ– ಎರಡು ಅಧ್ಯಯನಗಳು, ಪುಟ–41, ಮು–2011*
7. *ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ–3, ಮು–2017*
8. *ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ–2, ಮು–2017*
9. *ಎಚ್.ಜೆ.ಲಕ್ಕಪ್ಪಗೌಡ, ಋಷಿ ಬಾನುಗಳ ಮೇಳ, ಪುಟ–68, ಮು—2007*

*ಆಕರ ಗ್ರಂಥಗಳು:*


1. *ಕುವೆಂಪು, ಕಾನೂರು ಹೆಗ್ಗಡತಿ – ಉದಯರವಿ ಪ್ರಕಾಶನ, ಮೈಸೂರು, 2017*
2. *ಕುವೆಂಪು, ಮಲೆಗಳಲ್ಲಿ ಮದುಮಗಳು – ಉದಯರವಿ ಪ್ರಕಾಶನ, ಮೈಸೂರು – 2017*
3. *ಕೀರ್ತಿನಾಥ ಕುರ್ತಕೋಟಿ, ಯುಗಧರ್ಮ ಹಾಗೂ ಸಾಹಿತ್ಯ ದರ್ಶನ –2016*
4. *ಟಿ.ಪಿ. ಅಶೋಕ, ಕುವೆಂಪು ಕಾದಂಬರಿ– ಎರಡು ಅಧ್ಯಯನಗಳು –2011*
5. *ಎಚ್.ಜೆ.ಲಕ್ಕಪ್ಪಗೌಡ, ಋಷಿ ಬಾನುಗಳ ಮೇಳ – 2007*